10)	ಚಿಕ್ಕಮಗಳೂರು	-	1) ಸಾರ್ವಜನಿಕ ಆಸ್ತಿ ಹಾನಿ	12.04
			2) ಖಾಸಗಿ ಆಸ್ತಿ ಹಾನಿ	12.24
11)	ಶಿವಮೊಗ್ಗ	-	ಇಲ್ಲ	
12)	ಕೋಲಾರ	-	1) ಖಾಸಗಿ ಮನೆ ಹಾನಿ	968.51
			2) ಕೆರೆಗಳಿಗೆ ಹಾನಿ	444.77
			3) ರಸ್ತೆ, ಸೇತುವೆ	341.77
			4) ಸಾರ್ವಜನಿಕ ಕಟ್ಟಡ	64.07
			5) ಪುರಸಭೆ ಆಸ್ತಿ ಹಾನಿ	59.65
			6) ಬೆಳೆ ಹಾನಿ	1415.31
			7) ಮಾನವ ಹಾನಿ	1.60
			ಒಟ್ಟು ರೂ.	3295.00 ಲಕ್ಷ
13)	ಗುಲ್ಬರ್ಗ	-	ಇಲ್ಲ	
14)	ಬಿಜಾಪುರ	-	ಇಲ್ಲ	
15)	ಮಂಡ್ಯ	-	ಖಾಸಗಿ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿ ಅಂದಾಜು ಹಾನಿ ರೂ.	1,14,41.776 ಲಕ್ಷ
16)	ಮಡಿಕೇರಿ	-	ಇಲ್ಲ	
17)	ತುಮಕೂರು	-	ಖಾಸಗಿ, ಸಾರ್ವಜನಿಕ ಕಟ್ಟಡಗಳು, ರಸ್ತೆಗಳು, ಬಾವಿಗಳು ಮತ್ತು ಬೆಳೆಗಳಿಗೆ ಹಾನಿ ರೂ.	1229.09 ಲಕ್ಷ
18)	ಬಳ್ಳಾರಿ	-	ಇಲ್ಲ	
19)	ಬೆಂಗಳೂರು (ಗ್ರಾಮಾಂತರ)	-	ಖಾಸಗಿ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿ ರೂ.	957.42 ಲಕ್ಷ
20)	ಬೆಂಗಳೂರು(ನಗರ)	-	ಖಾಸಗಿ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿ ರೂ.	517.75 ಲಕ್ಷ.

ಬರಗಾಲ ಪರಿಹಾರ ಕಾಮಗಾರಿಗಳು

160 (1179) ಶ್ರೀ ಸಾದತ್ ಅಲಿ ಖಾನ್:- (ಚನ್ನಪಟ್ಟಣ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರವು 1989 ರಿಂದ ಇಂದಿನವರೆಗೂ ಬರ ಪರಿಹಾರ ಕಾಮಗಾರಿಗಳ ಅಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಖರ್ಚು ಮಾಡಿರುವ ಹಣವೆಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಇದರಲ್ಲಿ ಕೇಂದ್ರ ಸರ್ಕಾರವು ನೀಡಿರುವ ಮೊತ್ತವೆಷ್ಟು? (ಸುಮಾರು)

ಇ) ಕೂಲಿಗಾಗಿ ನೀಡಿರುವ ಧಾನ್ಯಗಳ ಪ್ರಮಾಣವೆಷ್ಟು ಮತ್ತು ಅದರ ಮೌಲ್ಯವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು)

ಅ) ರೂ.141.30 ಲಕ್ಷ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ:-

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಉದ್ಯೋಗ ಸೃಜನೆ (ಲಕ್ಷ ರೂ.ಗಳಲ್ಲಿ)	ಕುಡಿಯುವ ನೀರಿನ ಪೂರೈಕೆ
1)	ಕನಕಪುರ	2.83	1485072.00
2)	ಚನ್ನಪಟ್ಟಣ	2.85	1861620.00
3)	ರಾಮನಗರಂ	2.73	1618292.00
4)	ಮಾಗಡಿ	2.79	1470004.00
5)	ನೆಲಮಂಗಲ	2.75	1378348.00
6)	ನೊಡ್ಡಬಳ್ಳಾಪುರ	2.75	1473364.00
7)	ದೇವನಹಳ್ಳಿ	2.75	1278300.00
8)	ಹೊಸಕೋಟೆ	2.75	1315000.00
	ಒಟ್ಟು	22.00	11880000.00

ಆ) 1) 1989-90 - ಇಲ್ಲ

2) 1990-91 - ರೂ. 70.00 ಲಕ್ಷ

3) 1991-92 - ರೂ. 35.00 ಲಕ್ಷ

ಇ) ಕೃಷಿ ಕಾರ್ಮಿಕರಿಗೆ ಕೂಲಿಗಾಗಿ ಧಾನ್ಯಗಳನ್ನು ನೀಡಿಲ್ಲ. ಸರ್ಕಾರಿ ಏಜೆನ್ಸಿ ಮೂಲಕ ಕಾಮಗಾರಿಗಳನ್ನು ಕೈಗೊಂಡಿದೆ.

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ 1990-91 ರಿಂದ ಇಂದಿನವರೆಗೆ ಬರಪರಿಹಾರ ಕಾಮಗಾರಿಗಳಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆ ಮಾಡಿರುವ ಒಟ್ಟು ಹಣವೆಷ್ಟು, ಹಾಗಿದ್ದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ, ಹಾಗೂ ಬಾಕಿ ಹಣ ಯಾವಾಗ ಬಿಡುಗಡೆಯಾಗಿದೆ ಪೂರ್ಣ ಮಾಹಿತಿ ನೀಡುವುದು, ಎಂದು ಕೇಳಿದ್ದೇನೆ. ಈ ಪ್ರಶ್ನೆಗೆ ಮಾನ್ಯ ಸಚಿವರು ಒಟ್ಟು ಬರಪರಿಹಾರ ಕಾಮಗಾರಿಗಳಿಗೆ ಒಂದು ಕೋಟಿ ಇಪ್ಪತ್ತೆಂಟು ಲಕ್ಷವೆಂಬತ್ತು ಸಾವಿರ ಬೋರ್ ಕುಡಿಯುವ ನೀರಿಗೆಂದು ಹೇಳಿದ್ದಾರೆ. ಬೇರೆ ಪೂರ್ಣ ಮಾಹಿತಿ ಕೊಟ್ಟಿಲ್ಲ, ಯಾವ ಮಾಹಿತಿಯನ್ನು ಸರಿಯಾಗಿ ಕೊಟ್ಟಿಲ್ಲ. ನೆಲಮಂಗಲ ತಾಲ್ಲೂಕು ನನ್ನ ಮತ ಕ್ಷೇತ್ರಕ್ಕೆ 13,78,348 ರೂಪಾಯಿ ಕುಡಿಯುವ ನೀರಿನ ಬಾವಿಗೆ ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. ಮಾನ್ಯ ಸಭಾಧ್ಯಕ್ಷರೇ ತಮ್ಮ ಮೂಲಕ ಕೇಳುತ್ತಿದ್ದೇನೆ ನನ್ನ ಮತ ಕ್ಷೇತ್ರವಲ್ಲಿ ವಿಶೇಷವಾಗಿ ಕಸಬಾ ಹೋಬಳಿಗಳಲ್ಲಿ 10 ಕೊಳವೆಬಾವಿಗಳಲ್ಲಿ 6-7 ಕೊಳವೆಬಾವಿಗಳು ವಿಫಲಗೊಂಡಿವೆ ಮತ್ತು ಅಲ್ಲಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಯಾವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ, ಇದನ್ನು ಅಧಿಕಾರಿಗಳ ಗಮನಕ್ಕೂ ತರುತ್ತಿದ್ದೇವೆ. ಆಗ್ರೋ ಇಂಡಸ್ಟ್ರೀಸ್‌ನವರಿಗೆ ಒಂದು ಮೀಟರ್ ಬಾವಿ ತೆಗೆಯುವುದಕ್ಕೆ 75-80 ರೂಪಾಯಿಗಳವರೆಗೆ ಕೊಡುತ್ತಿದ್ದಾರೆ, ಆದೇ ಖಾಸಗಿಯವರು 35-40 ರೂಪಾಯಿಗೆಲ್ಲಾ ತೆಗೆಯುತ್ತಾರೆ. ಮತ್ತೆ ಸರ್ಕಾರದವರು ಇನ್ನು ಮುಂದೆ "ನೋ ಸಾಟರ್ ನೋ ಮನಿ ಸ್ಕೀಮ್"ನ್ನು ಜಾರಿಗೆ ತಂದರೆ ಈಗ ಸರ್ಕಾರ ಏನು ಹಣ ಖರ್ಚುಮಾಡುತ್ತಿದೆ ಅದು ಉಳಿಯುತ್ತದೆ. ಕುಡಿಯುವ ನೀರಿನ ಸಮಸ್ಯೆಯೂ ಬಗೆಹರಿಯುತ್ತದೆ. ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಚರ್ಚೆಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಕುಡಿಯುವ ನೀರಿನ ಬಾವಿಗಳನ್ನು ಪರ್ಚಿಕ್ಯುಲರ್ಲಿ ಬೋರ್‌ವೆಲ್ಸ್ ಇದಕ್ಕೆ ಡೆಪ್ಯುಟಿ ಕಮೀಷನರ್‌ರವರು ಜಿಲ್ಲೆಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅವರಿಗೆ ನಾವು ಒಟ್ಟಿಗೆ ಹಣವನ್ನು ಕೊಡುತ್ತೇವೆ. ಎಲ್ಲೆಲ್ಲಿ ಇವುಗಳ ಅವಶ್ಯಕತೆ ಇದೆ, ಆ ಅವಶ್ಯಕತೆಯ ಆಧಾರದ ಮೇಲೆ ಆ ಹಳ್ಳಿಗಳಲ್ಲಿ ಅವರು ಬೋರ್‌ವೆಲ್ ತೆಗೆಯುವ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ರೇಟ್ ಕೂಡ ಅವರೇ ನಿಗದಿ ಮಾಡುತ್ತಾರೆ. ಗೌರ್ನಮೆಂಟ್‌ನಿಂದ ಇಷ್ಟೇ ರೇಟ್ ಫಿಕ್ಸ್ ಮಾಡಬೇಕು ಅಂತ ನಿಯಮವಿಲ್ಲ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಸಂಬಂಧಪಟ್ಟ ಇಲಾಖೆಯ ಜೊತೆಯಲ್ಲಿ ಸಂಪರ್ಕ ಮಾಡಿ ಅವರು ರೇಟನ್ನು ಫಿಕ್ಸ್ ಮಾಡಿ ಬೋರ್‌ವೆಲ್ ತೆಗೆಯತಕ್ಕಂಥದ್ದಾಗಲಿ ಅಥವಾ ಈವನ್ ಪೈಪ್ಸ್ ಮಟರ್ ಸಪ್ಲೈ ಸ್ಕೀಮ್ ತೆಗೆಯತಕ್ಕಂಥದ್ದು ಕೂಡ ಮಾಡುತ್ತಾರೆ.

ನೆಲಮಂಗಲದಲ್ಲಿ 34 ಬೋರ್‌ವೆಲ್ಸ್ ಮತ್ತು ಕುಡಿಯುವ ನೀರಿನ ಬಾವಿಗಳನ್ನು ಮಾಡಿದ್ದಾರೆ. ಈ ಮಿನಿ ವಾಟರ್ ಸಪ್ಲೈ ಸ್ಕೀಂ ಇಲ್ಲ. ಈ ರೀತಿಯಾಗಿ ಸರ್ಕಾರದಿಂದ ಬೆಂಗಳೂರು ರೂರಲ್‌ನಲ್ಲಿ 347 ಬೋರ್‌ವೆಲ್‌ಗಳು, 92 ಕಾಮಗಾರಿಗಳು ಮತ್ತು ಆರು ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಮಾಡಿದ್ದೇವೆ.

ಶ್ರೀ ಆಂಜನ ಮೂರ್ತಿ:- ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ ಕೊಳವೆ ಬಾವಿಗಳು ವಿಫಲಗೊಂಡಿರುವುದರಿಂದ ಅವುಗಳನ್ನು ರಿಪೇರಿ ಮಾಡಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ, ಅದಕ್ಕೆ ಸೂಕ್ತ ಆದೇಶವನ್ನು ನೀಡುವೇಕೆಂದು ಕೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ:- ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ 1991ನ ಅಕ್ಟೋಬರ್ - ನವೆಂಬರ್‌ನಲ್ಲಿ ಹಾನಿ ಎಷ್ಟು ಆಗಿದೆ ಎನ್ನುವುದಕ್ಕೆ 32 ಕೋಟಿ ರೂಪಾಯಿ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಆದರಲ್ಲಿ ಅನೇಕ ರಸ್ತೆಗಳು ಕೊಚ್ಚಿ ಹೋಗಿವೆ. ಮೋರಿಗಳು ಬಿದ್ದು ಹೋಗಿವೆ. ಕೆರೆಗಳಂತೂ ಅಲ್ಲಲ್ಲಿ ಲೀಕೇಜ್ ಆಗಿ ಕೋಡಿಗಳು ಕಿತ್ತು ಹೋಗಿವೆ. ಈಗ ಏನು ಆಗಿದೆ ಎಂದರೆ ಕಮ್ಯೂನಿಕೇಶನ್ ಇಲ್ಲ. ಕೆಲವು ಕಡೆ ಸೈಕಲ್‌ಗಳಲ್ಲಿ, ಮೋಟಾರ್ ಬೈಕ್‌ಗಳಲ್ಲಿ ಬರುವುದಕ್ಕೆ ಆಗುವುದೇ ಇಲ್ಲ, ಎಲ್ಲಿ ನೋಡಲಿ ಅಲ್ಲಿ ಹಳ್ಳ ಕೊಳ್ಳಗಳು ಬಿದ್ದು ಬಸ್ಸುಗಳು ಸಹ ಓಡಾಡಲಿಕ್ಕೆ ಆಗದೇ ಬಹಳ ಛಜೀತಿ ಆಗಿದೆ. ಈಗ ನೀವು ಏನು ಒಂದು ಕೋಟಿ, 35 ಲಕ್ಷ ರೂಗಳನ್ನು ಕೊಟ್ಟಿದ್ದೀರಿ, ಅದರಲ್ಲಿ ಎಲ್ಲಾ ಜಿಲ್ಲೆಗಳೂ ಸೇರಿಕೊಂಡಿವೆ. ಕೋಲಾರ ಒಂದು ಜಿಲ್ಲೆಗೆ ಅಲ್ಲ. ಈಗ ಕೊಟ್ಟಿರುವಂತಹ ಹಣ ಯಾವ ಮೂಲೆಗೂ ಸಾಲದು. ಅದಕ್ಕೋಸ್ಕರ ಹಣವನ್ನು ನಮ್ಮ ಜಿಲ್ಲೆ ಮತ್ತು ಇತರೆ ಜಿಲ್ಲೆಗಳಿಗೂ ಸಹ ಕೊಟ್ಟು ಎಲ್ಲಾ ಕೆಲಸವನ್ನೂ ಮಾಡಿಸಬೇಕಾಗಿದೆ. ಈಗ ಈ ಕಮ್ಯೂನಿಕೇಶನ್ ರೋಡ್ಸ್ ಏನಿದೆ ಅವುಗಳನ್ನು ಎಲ್ಲೆಲ್ಲಿ ಸರಿಪಡಿಸಬೇಕೋ ಅದರ ಬಗ್ಗೆ ಆದಷ್ಟು ಬೇಗ ಕ್ರಮಕೈಗೊಳ್ಳಬೇಕು. ಇಲ್ಲದೇ ಹೋದರೆ ಪುನಃ ಮಳೆ ಬಂದರೆ ತೊಂದರೆಯಾಗುತ್ತದೆ. ಈಗ ಸುನಾಗಿದ ಎಂದರೆ ಹೈಸ್ಕೂಲ್, ಮಿಡ್ಲ್ ಸ್ಕೂಲ್, ಪ್ರೈಮರಿ ಸ್ಕೂಲ್‌ಗಳು, ಸರ್ಕಾರಿ ಕಛೇರಿಗಳು, ತಾಲ್ಲೂಕು ಆಫೀಸುಗಳು ಎಲ್ಲಾ ಕಡೆಗಳಲ್ಲಿ ಕಟ್ಟಡಗಳು ಲೀಕ್ ಆಗುತ್ತಾ ಇವೆ. ನಾಳೆ ಏಪ್ರಿಲ್, ಮೇ ತಿಂಗಳಿನಲ್ಲಿ ಮಳೆ ಪ್ರಾರಂಭವಾಗುತ್ತದೆ. ಪುನಃ ಲೀಕ್ ಆಗಿ ಅವುಗಳು ಬಿದ್ದು ಹೋಗುವ ಸಂದರ್ಭ ಬಂದು ಅನೇಕ ಕಡೆ ಸಾವುನೋವುಗಳು ಉಂಟು ಆಗುವ ಪರಿಸ್ಥಿತಿ ಇರುವುದರಿಂದ ಸಾರ್ವಜನಿಕ ಕಟ್ಟಡಗಳು, ಸ್ಕೂಲ್ ಬಿಲ್ಡಿಂಗ್‌ಗಳನ್ನು ರಿಪೇರಿ ಮಾಡಿಸಿ. ಇದರ ಜೊತೆಗೆ ಆದಷ್ಟು ಬೇಗ ರಸ್ತೆಗಳನ್ನೂ ಸಹ ರಿಪೇರಿ ಮಾಡಿಸುವುದಕ್ಕೆ ತಕ್ಷಣ ವಿರ್ಪಾಡು ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಳೆಯಿಂದ ಏನು ಅನಾಹುತ ಆಗಿದೆ, ಅದರ ಪರಿಹಾರಕ್ಕಾಗಿ ಕೋಲಾರ, ತುಮಕೂರು, ಬೆಂಗಳೂರು ರೂರಲ್, ಮಂಡ್ಯ, ಮೈಸೂರು ಇವೆಲ್ಲ ಜಿಲ್ಲೆಗಳಿಗೂ ತಮಗೆ ಗೊತ್ತಿದ್ದಂತೆ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಕೂಡ ನಾವು ಹಣ ಬಿಡುಗಡೆ ಮಾಡಿದ್ದೇವೆ. ಜಿಲ್ಲಾಪರಿಷತ್ತಿನ ಮುಖಾಂತರ ಕೆಲವು ರಸ್ತೆಗಳಿಗೆ, ಸ್ಕೂಲ್ ಬಿಲ್ಡಿಂಗ್‌ಗಳಿಗೆ ಬ್ರಿಡ್ಜ್‌ಗಳಿಗೆ ಆಗಲಿ ಹಣ ಬಿಡುಗಡೆ ಮಾಡಬೇಕು ಎಂದು ಸರ್ಕಾರದ ಒಂದು ಪರಿಶೀಲನೆಯಲ್ಲಿದೆ. ಈ ಬಗ್ಗೆ ನಾವು ಈಗಾಗಲೇ ಆರ್ಥಿಕ ಇಲಾಖೆಯನ್ನು ಕೇಳಿದ್ದೇವೆ. ಜಿಲ್ಲಾ ಪರಿಷತ್ತಿಗೂ ಕೂಡಾ ಸ್ವಲ್ಪ ಹಣವನ್ನು ನಾವು ಕೊಟ್ರೆ ಪರ್ಟಿಕ್ಯುಲರ್‌ಲಿ ರೆಸ್ಪೋರೇಷನ್ ಆಫ್ ರೋಡ್ಸ್, ಬ್ರಿಡ್ಜಸ್ ಅಂಥ ಕೆಲಸ ಮಾಡುವುದಕ್ಕೆ ಆಗುತ್ತದೆ. ಅದಕ್ಕೆ ಈಗ 5 ಕೋಟಿ ರೂಪಾಯಿ ಕೇಳಿದ್ದೇವೆ. ಅದು ಬಂದ ತಕ್ಷಣ ಈ ಐದಾರು ಜಿಲ್ಲೆಗಳಿಗೆ ರಿಲೀಸ್ ಮಾಡುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ:- ಪ್ರತಿಯೊಂದು ಮಂಡಲ್‌ನಲ್ಲೂ ಜೆ.ಆರ್.ವೈ ಏನಿದೆ, ಅದನ್ನು ಮಾರ್ಚ್ ತಿಂಗಳ ಕೊನೆಯೊಳಗೆ ಖರ್ಚು ಮಾಡಬೇಕು, ಇಲ್ಲದೆ ಹೋದರೆ ಕೇಂದ್ರ ಸರ್ಕಾರದವರು ಮುಂದಿನ ವರ್ಷ ಜೆ.ಆರ್.ವೈ ವರ್ಕ್ಸ್‌ನಲ್ಲಿ ಕೊಡತಕ್ಕ ಹಣ ಏನು ಇರುತ್ತದೆ ಅದರಲ್ಲಿ ಖೋತಾ ಮಾಡುತ್ತಾರೆ. ಆದ್ದರಿಂದ ತಾವು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಇದ್ದೀರಿ, ರೆವಿನ್ಯೂ ಮಿನಿಸ್ಟರ್ ಕೂಡ ಆಗಿದ್ದೀರಿ. ಆದ್ದರಿಂದ ಮಂಡಲ್‌ನಲ್ಲಿ ಈ ಅತಿವೃಷ್ಟಿಯಿಂದ ಹಾನಿಗೀಡಾದ ಕಡೆ ಜೆ.ಆರ್.ವೈ ವರ್ಕ್ಸ್ ಮೂಲಕ ಈ ಹಣವನ್ನು ಖರ್ಚು ಮಾಡುವೇಕೆಂದು ಸರ್ಕಾರದಿಂದ ಒಂದು ಸರ್ಕ್ಯೂಲರ್ ನಾಳೆ ಕಳುಹಿಸಿಕೊಡುತ್ತೀರಾ?

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ:- ಆ ರೀತಿಯಾಗಿ ಸರ್ಕ್ಯೂಲರ್ ಕಳುಹಿಸಿಕೊಡಬೇಕು ಎಂದು ನಾನು ತೀರ್ಮಾನ ತೆಗೆದುಕೊಂಡಾಗ ಅವರು ನನ್ನ ಪಕ್ಕದಲ್ಲಿ ಇದ್ದರು. ಅವರೇ ಡ್ರಾಫ್ಟ್ ಮಾಡಿ ಇನ್ನೆಲ್ಲ ಮಾಡಬೇಕು ಎಂದು ಹೇಳಿದ ಮೇಲೆ ನಾನು ಅದನ್ನು ತರಿಸಿ ರೆಡಿ ಮಾಡಿದ್ದೇನೆ. ಅದೇ ರೀತಿಯಾಗಿ ಇನ್ಸ್‌ಟ್ರಕ್ಷನ್ ಕೊಡುತ್ತಾ

ಇದ್ದೇವೆ. ಮತ್ತು ಜವಾಹರ್ ರೋಜ್‌ಗಾರ್ ಯೋಜನೆಗೆ ನಾವು ಹಣವನ್ನು ವಿತ್‌ಹೆಲ್ಡ್ ಮಾಡುವ ಪ್ರಶ್ನೆಯೇ ಬರಲ್ಲ, ಈ ಯೋಜನೆಯಲ್ಲಿ ಏನು ಹಣ ಬರುತ್ತದೆ ಅದನ್ನು ಸಂಪೂರ್ಣವಾಗಿ ನಾವು ಬಿಡುಗಡೆ ಮಾಡುತ್ತೇವೆ.

ಶ್ರೀ ಸಾದತ್ ಅಲಿಖಾನ್:- ಚನ್ನಪಟ್ಟಣ ವಿಚಾರದಲ್ಲಿ ಸ್ಕೇರ್‌ಸಿಟಿ ವರ್ಕ್ಸ್‌ನಲ್ಲಿ ಬೋರ್‌ವೆಲ್‌ಗೆ ನಾವು ರಿಕ್ವಿಸಿಷನ್ ಕೊಟ್ಟಿದ್ದೇವೆ. ಪೆಂಡಿಂಗ್ ಇಲ್ಲಾ ಎಂದು ತಾವು ಕೊಟ್ಟಿದ್ದೀರಿ. 25 ಬೋರ್‌ವೆಲ್ಸ್ ಬೇಕು ಎಂದು ನಾವು ಕೇಳಿದ್ದೇವೆ, ಅದನ್ನು ಯಾವಾಗ ಮಾಡಿಕೊಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಚನ್ನಪಟ್ಟಣಕ್ಕೆ ಕೂಡ ನಾವು ಹಣ ರಿಲೀಸ್ ಮಾಡಿದ್ದೇವೆ. ಸುಮಾರು 3 ವರ್ಷಗಳಲ್ಲಿ 18 ಲಕ್ಷ 61 ಸಾವಿರದ 620 ರೂಪಾಯಿ ಗಳನ್ನು ಈ ಬೋರ್‌ವೆಲ್ ಸ್ಕೀಮಿಗೋಸ್ಕರ ನಾವು ರಿಲೀಸ್ ಮಾಡಿದ್ದೇವೆ.

ಶ್ರೀ ಸಾದತ್ ಅಲಿಖಾನ್:- ನಾವು 25 ಬೋರ್‌ವೆಲ್ ಬೇಕೆಂದು ಕೇಳಿದ್ದೆವು, ಅದು 6 ತಿಂಗಳಿನಿಂದ ಪೆಂಡಿಂಗ್ ಇದೆ. ಇದನ್ನು ಯಾವಾಗ ಮಾಡಿಕೊಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಮತ್ತೆ ಅಡಿಶನಲ್ ಆಗಿ ಇನ್ನೂ 25 ಬೋರ್‌ವೆಲ್ ಕೂಡಿ ಎಂದು ಕೇಳುತ್ತಿದ್ದಾರೆ. ಅದು ಪೆಂಡಿಂಗ್‌ನಲ್ಲಿವೆ ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ, ಹಣ ಬಂದಾಗ ಅದನ್ನು ಹೊತ ಹಂಚವಾಗಿ ಕೊಡೋಣ.

ಕೃಷಿ ವಿಶ್ವವಿದ್ಯಾಲಯದಲ್ಲಿ ಮುಖ್ಯ ಹುದ್ದೆಗಳ ಭರ್ತಿ.

142 (1130) ಡಾ. ಜಿ. ಪರಮೇಶ್ವರ್ (ಮಧುಗಿರಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮುಖ್ಯ ಅಧಿಕಾರಿಗಳ ಹುದ್ದೆಗಳನ್ನು ಕಳೆದ ಅನೇಕ ವರ್ಷಗಳಿಂದ ಭರ್ತಿ ಮಾಡದೆ ಇರುವುದು ನಿಜವೇ,

ಆ) ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ,

ಇ) ಇದು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ಅಬಿವೃದ್ಧಿ ಮತ್ತು ಸಂಶೋಧನಾ ಕಾರ್ಯಕ್ರಮಗಳ ಮೇಲೆ ಪರಿಣಾಮ ಉಂಟು ಮಾಡುವುದಿಲ್ಲವೇ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

(ಅ) ಹೌದು

(ಆ) ಎರಡರಿಂದ ಐದು ವರ್ಷಗಳು

(ಇ) ದಿನನಿತ್ಯದ ಕೆಲಸಕಾರ್ಯಗಳು ಸುಗಮವಾಗಿ ನಡೆಯುವಂತೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ.

(ಈ) ಮುಖ್ಯ ಹುದ್ದೆಗಳನ್ನು ಬೇಗನೆ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಡಾ. ಜಿ. ಪರಮೇಶ್ವರ್:- ಮಾನ್ಯ ಅಧ್ಯಕ್ಷರೆ ನನಗೆ ಒದಗಿಸಿರತಕ್ಕಂಥ ಉತ್ತರದಲ್ಲಿ ಏನು ಟ್ರಾನ್ಸ್‌ಲೇಶನ್ ಮಾಡಿದ್ದಾರೆ ಅದರಲ್ಲಿ ಒಂದು ತಪ್ಪಾಗಿದೆ.

" Whether it is a fact that key officers posts have not been filled up in the U.A.S. Bangalore for the last seven years?" ಅಂತ ಕೇಳಿದ್ದಕ್ಕೆ The answer is "Yes" ಎಂದು ಹೇಳಿದ್ದಾರೆ. ಆದರೆ ಕನ್ನಡದಲ್ಲಿ 7 ವರ್ಷ ಎನ್ನುವುದನ್ನು ಬಿಟ್ಟುಬಿಟ್ಟಿದ್ದಾರೆ ಕನ್ನಡದಲ್ಲಿ ಕಳೆದ ಅನೇಕ ವರ್ಷಗಳಿಂದ ಭರ್ತಿ ಮಾಡದೇ ಇರುವುದು ಎಂದು ಹೇಳಿದ್ದಾರೆ. ಇದನ್ನೇ ನಾವು ನೋಡಿದರೆ 7 ವರ್ಷ ನಾವು ಫಿಲಪ್ ಮಾಡಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ ಮಾನ್ಯಮಂತ್ರಿಗಳನ್ನು ನಾನು ಕೇಳುತ್ತಿರುವುದು 7 ವರ್ಷಗಳಿಂದ